| ಕ್ರಿಮಿನಲ್ ಪ್ರಕರಣ ಸಂಖ್ಯೆ | 638/2018 |
|---|---|

ದಿನಾಂಕ 11-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 3 ಫ್ರಾಸಾಃ 3

**ಪಾಟೀ ಸವಾಲು: ಆರೋಪಿ ಪರ ವಕೀಲರಾದ ಶ್ರೀ ಪಿ.ಟಿ.ಎನ್. ರವರಿಂದ:**

ನಾನು ಶ್ರೀ ರಾಮ್ ಫೈನಾನ್ಸ್ ನಲ್ಲಿ ಕೆಲಸ ಮಾಡುತ್ತೇನೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ನೇಮಕಾತಿ ಆದೇಶದ ಪ್ರತಿಯನ್ನು ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವುದಿಲ್ಲ. ದಿ: 26–09–2018 ರಂದು ಸಂಜೆ 5–30 ಗಂಟೆಗೆ ಆರೋಪಿತನು ನಮ್ಮ ಕಚೇರಿಗೆ ಬಂದಿದ್ದನು. ನಮ್ಮ ಕಚೇರಿಯ ಸಮಯವು ಬೆಳಿಗ್ಗೆ 9–30 ರಿಂದ ಸಂಜೆ 5–30 ಗಂಟೆಯವರೆಗೆ ಇರುತ್ತದೆ. ದೇವದುರ್ಗದ ಬಾಗೋಡಿ ಸಂಕೀರ್ಣದಲ್ಲಿ ನಮ್ಮ ಕಚೇರಿಯು ಬರುತ್ತದೆ. ಶ್ರೀ ರಾಮ್ ಫೈನಾನ್ಸ್ ಕಚೇರಿಯು ಬಾಗೋಡಿ ಸಂಕೀರ್ಣದಲ್ಲಿ ಬಾಡಿಗೆಯಿಂದ ಇರುತ್ತದೆ ಎಂದು ತೋರಿಸಲು ಈ ಪ್ರಕರಣದಲ್ಲಿ ನಾನು ಕಾಗದ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ. ಆರೋಪಿತನು ಒಬ್ಬನೇ ಬಂದಿದ್ದನು ಆತನ ಜೊತೆಗೆ ಮತ್ಯಾರು ಬಂದಿರಲಿಲ್ಲ.

ಆರೋಪಿತನು ನಮ್ಮ ಕಚೇರಿಗೆ ಬಂದಾಗ, ನಾನು ಚಾಸಾ–1 ಮತ್ತು 2 ರವರು ಇದ್ದೆವು. ಅದೇ ರೀತಿ ಚಾಸಾ–4 ರವರು ಸಹ ಇದ್ದರು. ಉಳಿದವರು ಸಹ ಇದ್ದರು ಅವರ ಹೆಸರುಗಳನ್ನು ಹೇಳಲು ನನಗೆ ಬರುವುದಿಲ್ಲ. ನಮ್ಮ ಕಚೇರಿಯಲ್ಲಿ ಸಿ.ಸಿ. ಟಿ.ವಿ. ಕ್ಯಾಮರಾ ಇರುತ್ತದೆ. ಆ ದಿನದಂದು ಬೆಳಿಗ್ಗೆ 9–30 ರಿಂದ ಸಂಜೆ 5–30 ಗಂಟೆಗೆ ಎಷ್ಟು ಜನ ಬಂದಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಆರೋಪಿತನು ಚಾಸಾ–1 ರವರಿಗೆ ವಿಚಾರಿಸಿದ್ದನು. ಆರೋಪಿತನು ಸಾಲವನ್ನು ಪಡೆಯಲು ನಮ್ಮ ಕಚೇರಿಗೆ ಬಂದಿದ್ದನು. ಆರೋಪಿತನು ಬಹಳ ಬಾರಿಗೆ ನಮ್ಮ ಕಚೇರಿಗೆ ಬಂದಿದ್ದನು. ಚಾಸಾ–1 ಮತ್ತು ಆರೋಪಿತರು ಏನು ಮಾತನಾಡಿದ್ದರು ಎಂದು ನಾನು ಕೇಳಿಸಿಕೊಂಡಿರುವುದಿಲ್ಲ. ಚಾಸಾ–1 ರವರಿಗೆ ಆರೋಪಿತನು ಅವಾಚ್ಯ ಶಬ್ದಗಳಿಂದ ಬೈದಿದ್ದನು. ಸೂಳೆ ಮಗನೆ ಚಪ್ಪಲಿ ತೆಗೆದುಕೊಂಡು ಹೊಡೆಯುತ್ತೇನೆ ಎಂದು ಆರೋಪಿತನು ಚಾಸಾ–1 ರವರಿಗೆ ಬೈದಿದ್ದನು. ಆರೋಪಿತನು

ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ಆರೋಪಿತನು ಚಾಸಾ-1 ರವರಿಗೆ ಚಪ್ಪಲಿಯನ್ನು ತೋರಿಸಿರುವುದಿಲ್ಲ ಆದರೆ ಆತನು ಅಂದಿರುತ್ತಾನೆ. ಆರೋಪಿತನು ನನಗೆ ಚಪ್ಪಲಿಯನ್ನು ತೋರಿಸಿರುವುದಿಲ್ಲ.

ಆರೋಪಿತನು ಇವತ್ತೆ ಸಾಲ ಬೇಕು ಎಂದು ಚಾಸಾ-1 ರವರಿಗೆ ಕೇಳಿದ್ದನು ಆವಾಗ ಚಾಸಾ-1 ರವರು ಇಲ್ಲ ಎಂದು ಹೇಳಿದ್ದರು. ನನಗೆ ಗೊತ್ತಿದ್ದ ಮಾಹಿತಿ ಪ್ರಕಾರ ಇಷ್ಟೆ ಪ್ರಕರಣ ಆಗಿರುತ್ತದೆ. ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ನಾನು ಪೋಲಿಸ್ ಠಾಣೆಗೆ ಹೋಗಿದ್ದೆ. ಸದರಿ ಪೋಲಿಸ್ ಠಾಣೆಯಲ್ಲಿ ನನ್ನನ್ನು ಪ್ರತ್ಯೇಕವಾಗಿ ವಿಚಾರಿಸಿರುವುದಿಲ್ಲ. ನಾನು ಯಾವಾಗ ಪೋಲಿಸ್ ಠಾಣೆಗೆ ಹೋಗಿದ್ದೆ ಎಂದು ನೆನಪಿರುವುದಿಲ್ಲ ಆದರೆ 3-4 ದಿನಗಳ ನಂತರ ನಾನು ಪೋಲಿಸ್ ಠಾಣೆಗೆ ಹೋಗಿದ್ದೆ ಎಂದು ಹೇಳುತ್ತಾರೆ. ಎಷ್ಟು ಗಂಟೆಗೆ ಪೋಲಿಸ್ ಠಾಣೆಗೆ ಹೋಗಿದ್ದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು 2 ಬಾರಿ ಪೋಲಿಸ್ ಠಾಣೆಗೆ ಹೋಗಿದ್ದೆ. ನಮ್ಮ ಸಿಬ್ಬಂದಿಯವರ ಜೊತೆಗೆ ನಾನು ಪೋಲಿಸ್ ಠಾಣೆಗೆ ಹೋಗಿದ್ದೆ. ಈ ಪ್ರಕರಣದ ಬಗ್ಗೆ ನಿಖರವಾಗಿ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದೂರನ್ನು ನೀಡಲು 2 ಬಾರಿ ಹೋಗಿದ್ದೆವು. ನಾನು ದೂರನ್ನು ಕೊಟ್ಟಿರುವುದಿಲ್ಲ. ಆರೋಪಿತನು ನನಗೆ ಸಾಲ ನೀಡಬೇಕೆಂದು ಕೇಳಿರುವುದಿಲ್ಲ ಹಾಗೂ ಆತನು ನನ್ನನ್ನು ಮಾತನಾಡಿಸಿರುವುದಿಲ್ಲ. ಆರೋಪಿತನು ಸಾಮಾಜಿಕ ಕಾರ್ಯಕರ್ತ ಹಾಗೂ ಸಾಮಾಜಿಕ ಕೆಲಸ ಮಾಡುತ್ತಾನೆ ಎಂದರೆ ಸರಿ. ಆರೋಪಿತನು ಬಹಳಷ್ಟು ಜನರಿಗೆ ನಮ್ಮ ಕಚೇರಿಯಿಂದ ಸಾಲ ಕೊಡಿಸುವುದು ಮಾಡಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ.

ಆರೋಪಿತನು ಸಾಲ ಪಡೆಯುವ ಸಲುವಾಗಿ ಸಾಕಷ್ಟು ಬಾರಿ ನಮ್ಮ ಕಚೇರಿಗೆ ಬಂದಿದ್ದನು ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿತನಿಗೆ ಸರಿಯಾಗಿ ಮಾಹಿತಿಯನ್ನು ನೀಡದೆ ಅವರನ್ನು ಸಾಕಷ್ಟು ಬಾರಿ ಅಲೆದಾಡಿಸಿರುತ್ತೀರಾ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಲ ಕೊಡಿಸಿದವರಿಗೆ ಹೆಚ್ಚಿನ ಬಡ್ಡಿದರ ವಿಧಿಸಿದ್ದರಿಂದ ಆರೋಪಿತನು ಚಾಸಾ-1 ರವರ ವಿರುದ್ದ ಅವರ ಮೇಲಾಧಿಕಾರಿಗಳಿಗೆ ದೂರನ್ನು ನೀಡಿದ್ದನು ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿತನು ಈ ರೀತಿಯಾಗಿ ಪ್ರಶ್ನೆ ಮಾಡಬಾರದು ಮತ್ತು ಆತನು ಕಚೇರಿಗೆ ಬರಬಾರದು ಎನ್ನುವ ಉದ್ದೇಶದಿಂದ ಚಾಸಾ-1 ರವರು ಆರೋಪಿತನ ವಿರುದ್ದ ಸುಳ್ಳು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಇವತ್ತು ನಾನು ಚಾಸಾ-1 ರವರ ಜೊತೆಗೆ ಬಂದಿರುತ್ತೇನೆ ಎಂದರೆ ಸರಿ. ಚಾಸಾ-1 ರವರ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಿ: 26-09-2018 ರಂದು ಸಂಜೆ 5-30 ಗಂಟೆಗೆ ಆರೋಪಿತನು ಸಾಲ ಕೇಳಲು ನಮ್ಮ ಕಚೇರಿಗೆ ಬಂದಿದ್ದರು ಎಂದು ನಾನು ಸುಳ್ಳು ಸಾಕ್ಷ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದು ನಾನು ಸುಳ್ಳು ಸಾಕ್ಷ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಗುನ್ನ ಸ್ಥಳದ ಚಕ್ಕು ಬಂದಿ ನನಗೆ ಗೊತ್ತಿರುವುದಿಲ್ಲ. ಅಲ್ಲಿ ಯಾವುದೇ ಘಟನೆ ನಡೆಯದಿದ್ದರು ಸಹ ನಾನು ಚಾಸಾ-1 ರವರ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಜೆ.ಎಂ.ಎಫ್.ಸಿ., ದೇವದುರ್ಗ